

ಕಡಮೆ ರಕ್ತ ಹರಿಯುತ್ತದೆ ಎಂಬ ಗುರಿ ಅದರದ್ದು. ತನ್ನ ಯೋಧರಿಗೆ ಗಡಿ ನಿಯಂತ್ರಣದ ಕಾರ್ಯತಂತ್ರಗಳನ್ನು ಕಲಿಸುವ ಸಲುವಾಗಿ 3 ಪ್ರಮುಖ ತರಬೇತಿ ಕೇಂದ್ರಗಳನ್ನು ಹೊಂದಿದೆ. ಯೋಧರಿಗೆ ಮೂಲಭೂತವಾದ ಹಾಗೂ ಅತ್ಯಂತ ವೃತ್ತಿಪರವಾದ ತರಬೇತಿ ನೀಡಲು ಗ್ವಾಲಿಯರ್–ಝಾನ್ಸಿ ಹೆದ್ದಾರಿಯಲ್ಲಿರುವ ತೇಕನ್‌ಪುರದಲ್ಲಿ ಬಿಎಸ್‌ಎಫ್ ಅಕಾಡೆಮಿ ಇದೆ. ಆಂತರಿಕ ಗಲಭೆಗಳ ನಿಯಂತ್ರಣಕ್ಕೆ ಮತ್ತು ಕಳ್ಳ ನುಸುಳುಕೋರರ ತಡೆಗೆ ವಿಶೇಷ ಕಮಾಂಡೋ ತರಬೇತಿಗಾಗಿ ಹಜಾರಿಬಾಗ್ ನಗರದಲ್ಲಿ ಕೇಂದ್ರವಿದೆ. ಯೋಧರಿಗೆ ಅತ್ಯಾಧುನಿಕ ಶಸ್ತ್ರಗಳ ಬಳಕೆ ಮತ್ತು ತಂತ್ರಗಳ ಬಗ್ಗೆ ತರಬೇತಿ ನೀಡಲು ಇಂದೋರ್ ನಗರದಲ್ಲಿ ಶಾಲೆಯೊಂದು ಕಾರ್ಯ ನಿರ್ವಹಿಸುತ್ತಿದೆ.

ಯೋಧರ ಸಾಮರ್ಥ್ಯ ಹೆಚ್ಚಲು ವಾಹನ ಚಾಲನೆ, ವಾಹನ ದುರಸ್ತಿ, ಸರಕು ಸಾಗಣೆ, ತುರ್ತು ಸಹಾಯದ ಅಭ್ಯಾಸವನ್ನು ಮಧ್ಯಪ್ರದೇಶದ ಸಾಗರ್ ಎಂಬಲ್ಲಿ ನೀಡಲಾಗುತ್ತಿದೆ. ತನ್ನ ಕಾರ್ಯನಿರ್ವಹಣೆಯಲ್ಲಿ ಶ್ವಾನಗಳನ್ನು ಬಳಸಿಕೊಳ್ಳಲು 'ಶ್ವಾನ ತರಬೇತಿ ಕೇಂದ್ರ' (ಗ್ವಾಲಿಯರ್), ಸಿಗ್ನಲ್ ತರಬೇತಿ ಕೇಂದ್ರ (ನವದೆಹಲಿ ಮತ್ತು ಯಲಹಂಕಬೆಂಗಳೂರು) ಸ್ಥಾಪಿತವಾಗಿವೆ.

ಗುಪ್ತಚರ ತರಬೇತಿ, ಶಂಕಿತರ ವಿಚಾರಣೆಯನ್ನು ನಡೆಸುವ ವಿಧಾನ, ನುಸುಳುಕೋರರನ್ನು ಪತ್ತೆ ಹಚ್ಚುವ ವಿಧಾನ, ಫೋಟೊಗ್ರಫಿ, ತಾಂತ್ರಿಕ ಬುದ್ಧಿಮತ್ತೆ, ರಕ್ಷಣಾ ಕ್ರಮ, ಗಲಭೆ ನಿಯಂತ್ರಣ ಇತ್ಯಾದಿ ಕೌಶಲಗಳನ್ನು ನವದೆಹಲಿಯ 'ಜಿ' ತರಬೇತಿ (ಜಿಟಿಎಸ್) ಕೇಂದ್ರದಲ್ಲಿ ಕಲಿಸಲಾಗುತ್ತಿದೆ.

ಬಿಎಸ್‌ಎಫ್ ಪರ್ವತ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಲು ವಿಶೇಷ ತರಬೇತಿ ಕೇಂದ್ರ ಡೆಹ್ರಾಡೂನ್ ನಗರದಲ್ಲಿದೆ. ಗಲಭೆಗಳನ್ನು ಮತ್ತು ಉಗ್ರಚಟುವಟಿಕೆಗಳನ್ನು ನಿಯಂತ್ರಿಸುವ ತರಬೇತಿ ಕೇಂದ್ರ 'ಸಿಐಎಟಿ' ಬೆಂಗಳೂರಿನ ಕಾರಹಳ್ಳಿಯಲ್ಲಿದೆ. ಕರಾವಳಿ ಗಸ್ತು ತರಬೇತಿಯನ್ನು ಗುಜರಾತಿನ ಓಖಾದಲ್ಲಿ ನೀಡಲಾಗುತ್ತಿದೆ. ಮೂಲ ತರಬೇತಿ ನೀಡುವ 11 ಅಂಗಸಂಸ್ಥೆಗಳು ವಿವಿಧ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಬಿಎಸ್‌ಎಫ್ ನೀಡುತ್ತಿರುವ ತರಬೇತಿಯ ಮಹತ್ವವನ್ನು ಅರಿತಿರುವ ಭೂತಾನ್, ನೇಪಾಳ, ಮಾರಿಷಸ್, ಕೀನ್ಯಾ, ಮಲೇಷ್ಯಾ, ಪ್ಯಾಲೆಸ್ಟೈನ್ ಮುಂತಾದ ದೇಶಗಳು ತಾವು ಸೇನೆಗೆ ನೇಮಿಸಿಕೊಂಡ ಯುವಕರನ್ನು ಹೆಚ್ಚಿನ ತರಬೇತಿಗಾಗಿ ಬಿಎಸ್‌ಎಫ್ ಬಳಿ ಕಳುಹಿಸುತ್ತಿವೆ. ಈಗಾಗಲೇ ಹತ್ತು ಸಾವಿರಕ್ಕೂ ಹೆಚ್ಚು ವಿದೇಶಿ ಯುವಕರಿಗೆ ಬಿಎಸ್‌ಎಫ್ ತರಬೇತಿ ನೀಡಿದೆ.



## ಬಿಎಸ್‌ಎಫ್‌ಗೆ ಸೇರುವುದು ಹೇಗೆ?

ಕಾನ್‌ಸ್ಟೇಬಲ್, ಸಬ್ ಇನ್‌ಸ್ಪೆಕ್ಟರುಗಳನ್ನು ಸಾಮಾನ್ಯ ವೃಂದಕ್ಕೆ ಹಾಗೂ ಸಂವಹನ ವ್ಯವಸ್ಥೆಗಾಗಿ ಅಸಿಸ್ಟೆಂಟ್ ಕಮಾಂಡೆಂಟ್, ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ (ರೇಡಿಯೋ ಮೆಕ್ಯಾನಿಕ್), ಹೆಡ್ ಕಾನ್‌ಸ್ಟೇಬಲ್ (ರೇಡಿಯೋ ಆಪರೇಟರ್) ಮತ್ತು ಹೆಡ್ ಕಾನ್‌ಸ್ಟೇಬಲ್ (ಫಿಟ್ಟರ್) ಗಳನ್ನು ಬಿಎಸ್‌ಎಫ್ ನಿಯಮಿತವಾಗಿ ನೇಮಕಾತಿ ಮಾಡಿಕೊಳ್ಳುತ್ತದೆ.

ಮೆಟ್ರಿಕ್ಯುಲೇಷನ್ ಅಥವಾ ತತ್ಸಮಾನ ಮತ್ತು ನಿರ್ದಿಷ್ಟ ತಾಂತ್ರಿಕ ವಿದ್ಯಾರ್ಹತೆ ಹೊಂದಿದವರು ಅರ್ಜಿ ಸಲ್ಲಿಸಲು ಯೋಗ್ಯರು. ಹುದ್ದೆಗೆ ತಕ್ಕಂತೆ ಕೆಲವು ದೈಹಿಕ ಮತ್ತು ವೈದ್ಯಕೀಯ ಅರ್ಹತೆಗಳ ಅಗತ್ಯ ಕೂಡಾ ಇದೆ. ಬಿಎಸ್‌ಎಫ್ ತನ್ನ ಪಡೆಗೆ ಮಹಿಳೆಯರನ್ನೂ ನೇಮಕ ಮಾಡಿಕೊಳ್ಳುತ್ತಿದ್ದು, ತನುಶ್ರೀ ಪಾರೇಕ್ ಎಂಬಾಕೆ ಭಾರತದ ಪ್ರಥಮ ಬಿಎಸ್‌ಎಫ್ ಕಂಬ್ಯಾಟ್ ಆಫೀಸರ್ ಆಗಿದ್ದಾರೆ. ಅನೇಕ ಮಹಿಳೆಯರು ಸಬ್ ಇನ್‌ಸ್ಪೆಕ್ಟರ್, ಕಾನ್‌ಸ್ಟೇಬಲ್‌ಗಳಾಗಿ ಸಾಧನೆ ಮೆರೆದಿದ್ದಾರೆ.

ಬಿಎಸ್‌ಎಫ್‌ನಲ್ಲಿ ಆರಂಭದ ಹುದ್ದೆ ಕಾನ್‌ಸ್ಟೇಬಲ್. ನಂತರ ಸಬ್ ಇನ್‌ಸ್ಪೆಕ್ಟರ್, ಅಸಿಸ್ಟೆಂಟ್ ಕಮಾಂಡೆಂಟ್ ಸೇರಿದಂತೆ 4 ಹಂತಗಳಲ್ಲಿ 16 ದರ್ಜೆಗಳಿವೆ. ಇಡೀ ವ್ಯವಸ್ಥೆಯ ನಿಯಂತ್ರಣ ಡೈರೆಕ್ಟರ್ ಜನರಲ್ ಕೈಯಲ್ಲಿರುತ್ತದೆ.

**ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in**